ನಾನು ಕಂಡ ವಿವೇಕಾನಂದ

ಡಾ.ಆರ್. ಬಾಲಸುಬ್ರಹ್ಮಣ್ಯಂ

# ಚಾರಿತ್ರಿಕ ಘಟನೆಗೆ ಸ್ನೇಹದ ಮುನ್ನುಡಿ

ಸ್ವಾಮಿ ವಿವೇಕಾನಂದರನ್ನು ಅಮೆರಿಕಕ್ಕೆ ಮತ್ತು ಇಡೀ ವಿಶ್ವಕ್ಕೆ ಅಧಿಕೃತವಾಗಿ ಪರಿಚಯ ಮಾಡಿಕೊಟ್ಟದ್ದು ಅವರು ಧಾರ್ಮಿಕ ಸಂಸತ್ತಿನಲ್ಲಿ ಮಾಡಿದ ಪ್ರಸಿದ್ಧ ಭಾಷಣ. ಆದರೆ ಈ ಕಾರ್ಯ ನಡೆದದ್ದು ಸುಲಲಿತವಾಗೇನೂ ಅಲ್ಲ. ಷಿಕಾಗೊಗೆ ಅವರು ಬಂದಿಳಿದಾಗ, ನೋಂದಣಿಗಾಗಿ ಪರಿಚಯ ಪತ್ರದ ಅಗತ್ಯವಿದೆ ಎಂಬುದು ಅವರಿಗೆ ತಿಳಿದುಬಂತು. ಅದೂ ಅಲ್ಲದೆ ನೋಂದಣಿಗಾಗಿ ನಿಗದಿಯಾಗಿದ್ದ ಅವಧಿಯೂ ಆದಾಗಲೇ ಮುಗಿದುಹೋಗಿತ್ತು. ಹೀಗಾಗಿ ಧಾರ್ಮಿಕ ಸಂಸತ್ತಿನಲ್ಲಿ ಮಾತನಾಡುವ ಅವಕಾಶ ಅವರಿಗೆ ಸಿಗುವ ಸಾಧ್ಯತೆಯೇ ಇರಲಿಲ್ಲ. ಹೀಗೇ ಕೆಲ ದಿನ ಷಿಕಾಗೊದಲ್ಲಿ ಕಳೆದ ಬಳಿಕ ತಮ್ಮ ಕೈಲಿದ್ದ ಹಣ ಕರಗುತ್ತಾ ಬಂದಿರುವುದು ಸ್ವಾಮೀಜಿಯ ಅರಿವಿಗೆ ಬಂತು. ಧಾರ್ಮಿಕ ಸಂಸತ್ತಿನ ಉದ್ಘಾಟನಾ ದಿನ ಸಹ ಕೆಲ ತಿಂಗಳುಗಳ ಕಾಲ ಮುಂದಕ್ಕೆ ಹೋಗಿತ್ತು. ಆಗ ಅವರು ಷಿಕಾಗೊದಿಂದ ಪ್ರಯಾಣ ಬೆಳೆಸಲು ತೀರ್ಮಾನಿಸಿದರು.

ಹಿಂದೆ ವ್ಯಾಂಕೋವರ್‌ನಿಂದ ಷಿಕಾಗೊಗೆ ರೈಲಿನಲ್ಲಿ ಪ್ರಯಾಣಿಸಿದ್ದಾಗ ಕೇಟ್ ಸ್ಯಾನ್‌ಬಾರ್ನ್ ಎಂಬ ಮಹಿಳೆಯನ್ನು ಅವರು ಭೇಟಿ ಮಾಡಿದ್ದುದು, ಧಾರ್ಮಿಕ ಸಂಸತ್ತಿಗೆ ಅವರ ಮಹತ್ವದ ಪ್ರವೇಶಕ್ಕೆ ದಾರಿ ಮಾಡಿಕೊಟ್ಟಿತು. ಸ್ವಾಮೀಜಿ ಅವರ ಚಹರೆ ಮತ್ತು ನಡವಳಿಕೆಯಿಂದ ಅತ್ಯಂತ ಪ್ರಭಾವಿತರಾಗಿದ್ದ ಕೇಟ್ ತಮ್ಮ ಗುರುತು ಪತ್ರವನ್ನು ನೀಡಿ, ಮೆಟ್‌ಕಾಫ್‌ನಲ್ಲಿರುವ ತಮ್ಮ ಮನೆಗೆ ಬಂದು ಆತಿಥ್ಯ ಸ್ವೀಕರಿಸುವಂತೆ ವಿವೇಕಾನಂದರನ್ನು ಆಹ್ವಾನಿಸಿದ್ದರು. ಈ ವಿವರವನ್ನು ಕೇಟ್ ತಮ್ಮ ಪುಸ್ತಕ 'ಅಬಾಂಡನಿಂಗ್ ಆ್ಯನ್ ಅಡಾಪ್ಟೆಡ್ ಫಾರ್ಮ್'ನಲ್ಲಿ ಹೀಗೆ ಬರೆದಿದ್ದಾರೆ: 'ಸನ್ಯಾಸಿಯಿಂದ ನಾನು ಆಕರ್ಷಿತಳಾದೆ. ಅವರ ವ್ಯಕ್ತಿತ್ವ ನನ್ನನ್ನು ಸೆಳೆಯಿತು. 6.2 ಅಡಿ ಎತ್ತರದ ಧೀರ ನಿಲುವಿನ ಅವರು ಇಡೀ ಮನುಕುಲದ ಅದ್ಭುತ ಮಾದರಿ ಎನಿಸಿತು. ಅವರು ಸಾಲ್ವಿನಿಯಷ್ಟೇ (ಆಗಿನ ಹೆಸರಾಂತ ಇಟಲಿ ನಟ) ಸ್ಫುರದ್ರೂಪಿಯಾಗಿದ್ದರು. ಜಗತ್ತಿಗೇ ಒಡೆಯನೇನೋ ಎಂಬಂತಹ ರಾಜಕಳೆ ಅವರಲ್ಲಿತ್ತು. ಆ ಕಪ್ಪು ಕಣ್ಣುಗಳಲ್ಲಿ ನವಿರು ಭಾವನೆ ಇತ್ತು. ಕುತೂಹಲಗೊಂಡರೆ ಮಿಂಚಿನಂತೆಯೂ, ಸಂತಸಗೊಂಡರೆ ನರ್ತಿಸುತ್ತಿರುವಂತೆಯೂ ಅವು ಭಾಸವಾಗುತ್ತಿದ್ದವು. ಸಾಕಷ್ಟು ಉದ್ದವಾಗಿದ್ದ ಹಳದಿ ಬಣ್ಣದ ರುಮಾಲು ಸುತ್ತಿಕೊಂಡಿದ್ದರು. ಕೆಂಪು ಬಣ್ಣದ ನಿಲುವಂಗಿ, ಅದಕ್ಕೆ ಗುಲಾಬಿ ವರ್ಣದ ನಡುಪಟ್ಟಿ ಕಟ್ಟಿಕೊಂಡಿದ್ದರು. ನಶ್ಯ ಕಂದು ಬಣ್ಣದ ಪ್ಯಾಂಟು, ಕಂದು ಕಾವಿ ಬಣ್ಣದ ಶೂಗಳನ್ನು ಧರಿಸಿದ್ದರು. ಅವರ ಇಂಗ್ಲಿಷ್ ನನ್ನ ಇಂಗ್ಲಿಷ್‌ಗಿಂತಲೂ ಉತ್ತಮವಾಗಿತ್ತು. ಪ್ರಾಚೀನ ಮತ್ತು ಆಧುನಿಕ ಸಾಹಿತ್ಯ ಎರಡನ್ನೂ ಓದಿಕೊಂಡಿದ್ದರು. ತಮ್ಮ ಮಾತಿನ ಮಧ್ಯೆ ಸಹಜವಾಗಿಯೇ ಶೇಕ್ಸ್‌ಪಿಯರ್, ಲಾಂಗ್‌ಫೆಲ್ಲೊ, ಟೆನ್ನಿಸನ್, ಡಾರ್ವಿನ್, ಮುಲ್ಲರ್, ಟಿನ್‌ಡಾಲ್ ಎಲ್ಲರನ್ನೂ ಉಲ್ಲೇಖಿಸುತ್ತಿದ್ದರು, ಬೈಬಲ್‌ನ ಹಲವಾರು ಪುಟಗಳು ಅವರ ನಾಲಿಗೆಯ ಮೇಲಿದ್ದವು. ಎಲ್ಲ ಧರ್ಮ, ಜನಾಂಗದ ಬಗ್ಗೆ ಸಹ ತಿಳಿದುಕೊಂಡಿದ್ದರೂ ಸಹಿಷ್ಣುತೆ ಉಳ್ಳವರಾಗಿದ್ದರು. ಶಿಕ್ಷಣದ ಕಂಗೊಳಿಸುವಿಕೆಯೂ ಸೇರಿ ಅವರು ಇವೆಲ್ಲದರ ಸಾಕಾರ ಮೂರ್ತಿಯಂತಿದ್ದರು'.

ಸ್ವಾಮೀಜಿ ಏನೇನು ಸಹಾಯವನ್ನು ನಿರೀಕ್ಷಿಸಿದ್ದರೋ ಅದೆಲ್ಲಾ ಅವರಿಗೆ ಲಭ್ಯವಾಗಲು ಹೆಚ್ಚು ಸಮಯವೇನೂ ಬೇಕಾಗಲಿಲ್ಲ. ಏಕಾಂಗಿತನ ಮತ್ತು ಹಣದ ಅಭಾವದಿಂದ ಅವರು 1893ರ ಆಗಸ್ಟ್ 14 ಅಥವಾ 15ರಂದು ಮೆಟ್‌ಕಾಫ್‌ಗೆ ತೆರಳಲು ಷಿಕಾಗೊದಿಂದ ಬೋಸ್ಟನ್‌ಗೆ ಬಂದಿಳಿದರು. ಈ ಸಂದರ್ಭವನ್ನು ಕೇಟ್ ಹೀಗೆ ಸ್ಮರಿಸಿದ್ದಾರೆ:

'ಆಗಷ್ಟೇ ನಾನು ಕಾಯಿಲೆಯಿಂದ ಎದ್ದಿದ್ದೆ. ರೈಲಿನಲ್ಲಿ ಸಿಕ್ಕಿದ್ದ ನನ್ನ ಗೌರವಾನ್ವಿತ ಸ್ನೇಹಿತ ಬೋಸ್ಟನ್‌ನ 'ಕ್ವಿನ್ಸಿ ಹೌಸ್'ನಲ್ಲಿ ನನ್ನ ಸೂಚನೆಗಾಗಿ ಕಾಯುತ್ತಿದ್ದಾರೆ ಎಂಬ ಸಂದೇಶ ಹೊತ್ತ ಟೆಲಿಗ್ರಾಂ ನನಗೆ ಸಿಕ್ಕಿತು. ಆಗ ನನಗೆ ಸ್ಪಷ್ಟವಾಗಿ ನೆನಪಾಯಿತು. ತಮಗೇನಾದರೂ ಏಕಾಂಗಿತನ ಕಾಡಿದರೆ ಅಥವಾ ನೆರವಿನ ಅಗತ್ಯ ಬಂದರೆ ನನ್ನ ಆತಿಥ್ಯ ಸ್ವೀಕರಿಸಬೇಕು ಎಂದು ನಾನು ಅವರನ್ನು ಆಗ್ರಹಿಸಿದ್ದೆ. ಹಾರ್ವರ್ಡ್ ಪ್ರೊಫೆಸರುಗಳು, ಕನ್‌ಕಾರ್ಡ್‌ನ ತತ್ವಜ್ಞಾನಿಗಳು, ನ್ಯೂಯಾರ್ಕ್‌ನ ಬಂಡವಾಳಶಾಹಿಗಳು, ಪ್ರಸಿದ್ಧ ಮಹಿಳೆಯರು, ಉತ್ತಮ ಲೇಖಕರು, ವಾಕ್ಪಟುಗಳ ಪರಿಚಯ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದ್ದೆ. ಆದರೆ ವಿವೇಕಾನಂದರು ಬಂದಿದ್ದ ಸಮಯ ಆಗಸ್ಟ್ ಮಧ್ಯಭಾಗವಾಗಿತ್ತು. ಆ ವೇಳೆಗೆ ಇವರ‍್ಯಾರೂ ಪಟ್ಟಣದಲ್ಲಿ ಇರಲಿಲ್ಲ. ಓಹ್! ಈ ಸಂದರ್ಭದಲ್ಲಿ ಬರುತ್ತಿರುವರಲ್ಲಾ, ಇವರಿಗೆ ನಾನು ಮಾಡಿದ್ದ ವಾಗ್ದಾನವನ್ನು ಹೇಗೆ ನಡೆಸಿಕೊಡಲಿ ಎಂಬ ಪ್ರಶ್ನೆ ನನ್ನಲ್ಲಿ ಮೂಡಿ ದಿಗಿಲುಂಟು ಮಾಡಿತು. ಆದರೂ ಧೈರ್ಯ ತಂದುಕೊಂಡು ಟೆಲಿಗ್ರಾಫ್ ಕಳುಹಿಸಿದೆ. ಅದರಲ್ಲಿ 'ನಿಮ್ಮ ಟೆಲಿಗ್ರಾಂ ತಲುಪಿದೆ. ಇಂದು 4.20ರ ರೈಲಿಗೆ ಬೋಸ್ಟನ್ ಅಲ್ಬನಿಗೆ ಬನ್ನಿ' ಎಂದು ತಿಳಿಸಿದ್ದೆ.'

ಕ್ಯಾಥರೀನ್ ಆ್ಯಬಟ್ ಸ್ಯಾನ್‌ಬಾರ್ನ್ ಒಬ್ಬ ಕವಯತ್ರಿ, ಶಿಕ್ಷಕಿ, ಉಪನ್ಯಾಸಕಿ, ಹಾಸ್ಯಪ್ರಜ್ಞೆ ಹೊಂದಿದ ರೈತ ಮಹಿಳೆ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ಪರೋಪಕಾರ ಬುದ್ಧಿಯುಳ್ಳವರಾಗಿದ್ದರು. ಕೇಟ್ ಎಂದೇ ಹೆಸರಾಗಿದ್ದ ಅವರು ಸ್ನೇಹಶೀಲೆ ಮತ್ತು ಸಂಘಜೀವಿಯಾಗಿದ್ದರು. ಸ್ವಾಮೀಜಿಗೆ ಆತಿಥ್ಯ ನೀಡಲು ಹೇಳಿ ಮಾಡಿಸಿದಂತಹ ವ್ಯಕ್ತಿಯಾಗಿದ್ದರು. ವಿವೇಕಾನಂದರನ್ನು ಅವರು ಪ್ರೊಫೆಸರ್ ರೈಟ್ ಮತ್ತು ಇತರ ಪ್ರಭಾವಿ ಮಹಿಳೆಯರು, ಪುರುಷರಿಗೆ ಪರಿಚಯ ಮಾಡಿಕೊಟ್ಟದ್ದಷ್ಟೇ ಅಲ್ಲ, ಇಡೀ ಅಮೆರಿಕದ ಅಂದಿನ ಸ್ಥಿತಿಗತಿಯ ಚಿತ್ರಣವನ್ನು ಅರ್ಥ ಮಾಡಿಕೊಳ್ಳಲು ಸಹ ನೆರವಾದರು.

ಸ್ವಾಮಿ ವಿವೇಕಾನಂದರು ಅಪಾರ ಪತ್ರಗಳನ್ನು ಬರೆದಿರುವರಾದರೂ ತಮ್ಮ ಆರಂಭಿಕ ದಿನಗಳ ಅನುಭವವನ್ನು ಅವರು ಹೆಚ್ಚಾಗಿ ಹಂಚಿಕೊಂಡಿಲ್ಲ. 20 ದಿನಗಳ ಬಳಿಕ ಅಳಸಿಂಗ ಪೆರುಮಾಳ್ ಅವರಿಗೆ ಬರೆದ ಪತ್ರದಲ್ಲಿ, ಭ್ರಮನಿರಸನ ಅವರಲ್ಲಿ ಗುಪ್ತಗಾಮಿನಿಯಾಗಿ ಇದ್ದುದು ತಿಳಿದುಬರುತ್ತದೆ. 'ಭಾರತದ ಬಡ ಜನರಿಗಾಗಿ ನಿಧಿ ಸಂಗ್ರಹಿಸಬೇಕೆಂಬ ನಮ್ಮ ರಮ್ಯ ಕಲ್ಪನೆಗಳೆಲ್ಲಾ ಕರಗಿಹೋಗಿವೆ. ಈಗ ನಾನು ಅಸಾಧ್ಯಗಳ ವಿರುದ್ಧ ಸೆಣಸಾಡಬೇಕಾಗಿದೆ. ಭಾರತಕ್ಕೆ ಹೊರಟು ಬಂದು ಬಿಡಬೇಕೆಂದು ನೂರು ಬಾರಿಯಾದರೂ ಅಂದುಕೊಂಡಿದ್ದೇನೆ. ಆದರೆ ನಾನು ದೃಢ ನಿಶ್ಚಯ ಮಾಡಿದ್ದೇನೆ ಮತ್ತು ಅತೀತವಾದ ಶಕ್ತಿಯೊಂದು ನನ್ನನ್ನು ಈ ಕಾರ್ಯಕ್ಕೆ ಇಳಿಸಿದೆ' ಎಂದು ಅವರು ತಿಳಿಸಿದ್ದರು.

ಕೇಟ್ ಅವರ ಜೊತೆ ಇದ್ದ ಬಗ್ಗೆ ಸ್ವಾಮೀಜಿ ಹೀಗೆ ಬರೆದಿದ್ದಾರೆ. 'ಈಗಷ್ಟೇ ನಾನು ಬೋಸ್ಟನ್‌ಗೆ ಸಮೀಪದ ಹಳ್ಳಿಯೊಂದರಲ್ಲಿ ವೃದ್ಧ ಮಹಿಳೆಯೊಬ್ಬರ ಅತಿಥಿಯಾಗಿದ್ದೇನೆ. ಆಕಸ್ಮಿಕವಾಗಿ ರೈಲಿನಲ್ಲಿ ಸಿಕ್ಕಿದ ಅವರು ತಮ್ಮ ಜೊತೆ ಬಂದಿರಲು ನನ್ನನ್ನು ಆಹ್ವಾನಿಸಿದರು. ಇದರಿಂದ ನನಗೂ ಸ್ವಲ್ಪ ಅನುಕೂಲವಾಗಿದೆ. ದಿನಕ್ಕೆ ಒಂದು ಪೌಂಡ್‌ನಷ್ಟು ಹಣ ಉಳಿತಾಯ ಆಗುತ್ತಿದೆ. ಅವರು ತಮ್ಮ ಸ್ನೇಹಿತರನ್ನು ಆಮಂತ್ರಿಸಿ ಭಾರತದ ಒಬ್ಬ ಕುತೂಹಲಕರ ವ್ಯಕ್ತಿಯನ್ನು ಅವರಿಗೆಲ್ಲ ತೋರಿಸುತ್ತಿದ್ದಾರೆ! ಇದೆಲ್ಲವನ್ನೂ ಸಹಿಸಿಕೊಳ್ಳಲೇಬೇಕಾಗಿದೆ. ಉಪವಾಸ, ಚಳಿ, ನನ್ನ ವಿಚಿತ್ರ ಉಡುಪು ನೋಡಿ ಬೀದಿಯಲ್ಲಿ ತಿರಸ್ಕಾರದಿಂದ ಕಾಣುವವರು ಇದೆಲ್ಲದರ ವಿರುದ್ಧವೂ ನಾನು ಹೋರಾಡಬೇಕಾಗಿದೆ. ಆದರೆ ಅಪಾರ ಪರಿಶ್ರಮವಿಲ್ಲದೆ ಯಾವ ಮಹತ್ಕಾರ್ಯವೂ ಆಗುವುದಿಲ್ಲ'.

ಕೇಟ್ ಅವರನ್ನು ವೃದ್ಧೆ ಎಂದು ಸ್ವಾಮೀಜಿ ಪ್ರಸ್ತಾಪ ಮಾಡಿರುವರಾದರೂ ಸ್ವಾಮೀಜಿಗೆ ಅವರ ಪರಿಚಯವಾದಾಗ ಅವರು ವೃದ್ಧೆಯಾಗಿರಲಿಲ್ಲ. 54 ವರ್ಷದವರಾಗಿದ್ದ ಕೇಟ್ ಅತ್ಯಂತ ಉತ್ಸಾಹಶೀಲರಾಗಿದ್ದರು. ಒಂದು ರೀತಿಯ ಜೀವಪರವಾದ ಹಾಸ್ಯಪ್ರಜ್ಞೆ, ಹಾಗೂ ತಮ್ಮ ಜೊತೆಗಾರರ ಬಗ್ಗೆ ಆರ್ದ್ರವಾದ ಅನುಕಂಪ ಅವರಲ್ಲಿತ್ತು. ಅವರ ನೆರವು ಇಲ್ಲದಿದ್ದರೆ ವಿವೇಕಾನಂದರಿಗೆ ಪ್ರೊಫೆಸರ್ ರೈಟ್ ಅವರನ್ನು ಭೇಟಿ ಮಾಡಲಾಗಲೀ ಅಥವಾ ಧಾರ್ಮಿಕ ಸಂಸತ್ತಿನಲ್ಲಿ ವಿಷಯ ಮಂಡಿಸಲಾಗಲೀ ಸಾಧ್ಯವಾಗುತ್ತಿರಲಿಲ್ಲ.

◆